ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯು ದಿನಾಂಕ 02-02-2019 ರಂದು ನಡೆದ ಸಭೆಯಲ್ಲಿ ತಗೆದುಕೊಂಡಿರುವ ಸ್ವಯಂ ನಿರ್ಣಯ

ವಿಷಯ ಸಂಖ್ಯೆ : ಸಾ.ನ್ಯಾ.ಸ್ಥಾ.ಸ/ /2018-19

ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯು ದಿನಾಂಕ: 02-02-2019 ರಂದು ಸಮಾವೇಶಗೊಂಡಿದ್ದು 2018-19ನೇ ಸಾಲಿಗೆ ಕಲ್ಯಾಣ ಕಾರ್ಯಕ್ರಮಗಳಡಿ ಹಮ್ಮಿಕೊಳ್ಳಲಾಗಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದ ಸಮುದಾಯದವರು ವಾಸಿಸುತ್ತಿರುವ ಪ್ರದೇಶಗಳಿಗೆ ಅವಶ್ಯವಿರುವ ವಿವಿಧ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಕಾಲೋನಿಗಳನ್ನು ಹಾಗೂ ಕೊಳಚೆ ಪ್ರದೇಶಗಳನ್ನು ಅಭಿವೃದ್ಧಿಪಡಿಸುವ ಸಂಬಂಧ ಹಿಂದಿನ ಆರ್ಥಿಕ ಸಾಲುಗಳಲ್ಲಿ ಉಳಿಕೆಯಾಗಿರುವ ಶೇ 24.10 ಅನುದಾನವನ್ನು ಮರು ಬಳಕೆ ಮಾಡುವ ಬಗ್ಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಆಯೋಗ ಸೂಚಿಸಿರುವ ಬಗ್ಗೆ ಪರಿಗಣಿಸಿದೆ.

ಅನುದಾನ ಕೊರತೆ ಇರುವ ಬಗ್ಗೆ ಶಾಸಕರು ಮತ್ತು ಪಾಲಿಕೆಯ ಹಲವಾರು ಸದಸ್ಯರು ಸಮಿತಿಗೆ ಮನವಿ ಸಲ್ಲಿಸಿ ದಲಿತರು ವಾಸವಿರುವ ಸ್ಥಳಗಳಲ್ಲಿ ವಿವಿಧಕಾಮಗಾರಿ ಯೋಜನೆಗಳನ್ನು ಹಮ್ಮಿಕೊಳ್ಳಲು ಕಲ್ಯಾಣ ಕಾರ್ಯಕ್ರಮಗಳಡಿ ಅನುದಾನ ಹಂಚಿಕೆ ಮಾಡಲು ಪ್ರಸ್ತಾವನೆಗಳನ್ನು ಸಲ್ಲಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಪಾಲಿಕೆಯ ಹಿಂದಿನ ಸಾಲಿನ ಆಯವ್ಯಯಗಳಲ್ಲಿ 2016-17 ರಿಂದ 2018-19 ನೇ ಸಾಲಿನವರೆಗೆ ವಿವಿಧಕಲ್ಯಾಣ ಕಾರ್ಯಕ್ರಮಗಳಡಿ ಮೀಸಲಿಟ್ಟಿರುವ ಅನುದಾನ. ಕಾಬ್ ಸಂಖ್ಯೆ ನೀಡಿರುವ ವಿವರಗಳನ್ನು ಸಮಿತಿಯು ಅವಲೋಕಿಸಲಾಗಿದೆ.

ಮುಂದುವರೆದಂತೆ ಶೇ24.10 ಅನುದಾನದ ಮೂಲಭೂತ ಸೌಕರ್ಯ, ಸಮುದಾಯ ಕಾರ್ಯಕ್ರಮಗಳ ವಿವಿಧ ಕಲ್ಯಾಣ ಕಾರ್ಯಕ್ರಮಗಳು/ ಲೆಕ್ಕಶೀರ್ಷಿಕೆಗಳಲ್ಲಿ 2016-17 ರಿಂದ 2017-18 ನೇ ಸಾಲಿಗೆ ಮೀಸಲಿಟ್ಟ ಅನುದಾನದಲ್ಲಿ ವೆಚ್ಚವಾಗದೆ ಉಳಿದಿರುವ ಉಳಿತ್ತದಲ್ಲಿ ರೂ.150.00 ಲಕ್ಷಗಳ ಅನುದಾನವನ್ನು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಸಮುದಾಯದವರು ವಾಸವಿರುವ ಪ್ರದೇಶಗಳಲ್ಲಿ ಅವಶ್ಯವಿರುವ ವಿವಿಧ ಮೂಲಭೂತ ಕಾರ್ಯಗಳನ್ನು ಒದಗಿಸುವ ಯೋಜನೆಗಳಿಗೆ ಈ ಕೆಳಕಂಡಂತೆ ಅನುಪಯೋಗಿಸಿಕೊಳ್ಳಲು ಸಮಿತಿಯು ಅಭಿಪ್ರಾಯಪಟ್ಟಿರುತ್ತದೆ.

Scanned by CamScanner

ಕ್ರಮ ಸಂಖ್ಯೆ	ವಿವರಗಳು	ಆದ್ಯತೆ ಯೊಂದಾಗಿ ಮಾಡಿರುವ ಲೆಕ್ಕಶೀರ್ಷಿಕೆ	ಒಟ್ಟು ಲಕ್ಷಗಳಲ್ಲಿ	
1	ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದವರು ವಾಸಿಸುತ್ತಿರುವ ಪ್ರದೇಶಗಳಿಗೆ ಬೋರ್ ವೆಲ್ / ನೀರು ಸರಬರಾಜು ಕಾಮಗಾರಿಗಳು	ಪಿ1878	2000	ಅಧ್ಯಕ್ಷರು, ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಮತ್ತು ಆಯವ್ಯಯ ಪಿಡೀಟಿಸಿ ಸೂಚಿಸುವ ಕಾಮಗಾರಿಗಳು
2	ವಿದ್ಯುತ್ ಬೀದಿ ದೀಪಗಳ ಅಳವಡಿಕೆ ಕಾಮಗಾರಿಗಳು	ಪಿ1878	1000	
3	ಅಗತ್ಯವಿರುವ ಇತರೆ ಮೂಲಭೂತ ಸೌಕರ್ಯದ ಕಾಮಗಾರಿಗಳು.	ಪಿ1878	10000	
4	ಸಮುದಾಯ ಭವನ ನಿರ್ಮಾಣ/ ಅಂಬೇಡ್ಕರ್ ಭವನ ನಿರ್ಮಾಣ/ ಸುತ್ತಮುತ್ತಲೂ ಇತರ ಅಭಿವೃದ್ಧಿ ಕಾಮಗಾರಿಗಳು	ಪಿ2652	2000	

ಶಾಸಕರು ಹಾಗೂ ಪಾಲಿಕೆ ಸದಸ್ಯರು ಸಲ್ಲಿಸಿರುವ ಮನವಿಗಳನ್ನು ಪರಿಶೀಲಿಸಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ವರ್ಗದ ಸಮುದಾಯದವರು ವಾಸವಿರುವ ಪ್ರದೇಶಗಳಲ್ಲಿ ಮೇಲ್ಕಂಡ ಮೂಲಭೂತ ಸೌಕರ್ಯಗಳ ಕಾಮಗಾರಿ ಕಾರ್ಯಕ್ರಮಗಳಿಗೆ ಲೆಕ್ಕಶೀರ್ಷಿಕೆ ಪಿ-1878 ಭಾಗ್ಯಜ್ಯೋತಿ ಬೆಳಕು, ಸೂರು/ನೀರುಯೋಜನೆ /ಇತರೆ ಕಾಮಗಾರಿಗಳು (ಮೂಲಭೂತ ಸೌಕರ್ಯ) ರೂ.13000 ಲಕ್ಷಗಳು, ಮತ್ತು ಪಿ-2652 ಸಮುದಾಯ ಸೌಲಭ್ಯಗಳಿಗೆ ಸಹಾಯಧನ ಲೆಕ್ಕ ಶೀರ್ಷಿಕೆ ಅಡಿ ರೂ.2000 ಲಕ್ಷಗಳು ಒಟ್ಟು ರೂ.15000ಲಕ್ಷಗಳ ಅನುದಾನವನ್ನು ಮೇಲ್ಕಂಡ ಲೆಕ್ಕಶೀರ್ಷಿಕೆಗಳ ಚಾಲ್ತಿ ಕಾಮಗಾರಿಗಳ (current work) ಅಡಿ ಅನುದಾನ ಮರುಹೊಂದಾಣಿಕೆ ಮಾಡಿಕೊಂಡು ಸದರಿ ಅನುದಾನವನ್ನು ಅವಶ್ಯವಿರುವ ವಾರ್ಡ್‌ಗಳ ಕಾಮಗಾರಿಗಳಿಗೆ ಅನುಗುಣವಾಗಿ, ಸಮಿತಿಯ ಅಧ್ಯಕ್ಷರ ವಿವೇಚನೆಗೆ ಒಳಪಟ್ಟು ಅನುದಾನ ಹಂಚಿಕೆ ಮಾಡಿ ತುರ್ತು ಕಾಮಗಾರಿಗಳೆಂದು ಪರಿಗಣಿಸಿ ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ವಹಿಸಿ ಕಾಮಗಾರಿಗಳನ್ನು ಜರೂರಾಗಿ ಕೈಗೊಳ್ಳಲು ಸಮಿತಿಯು ಸರ್ವಾನುಮತದಿಂದ ತೀರ್ಮಾನಿಸಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಅನುಮೋದನೆಗಾಗಿ ಮಂಡಿಸಲು ಸಮಿತಿಯು ತೀರ್ಮಾನಿಸಿದೆ.

ಅಧ್ಯಕ್ಷರು

ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ

ಬೃಹತ್ ಬೆಂಗಳೂರು ಮಹಾನಗರ ಪಾ

ಕ್ರಮ ಸಂ.	ಸದಸ್ಯರ ಹೆಸರುಗಳು		ಸಹಿ
1.	ಶ್ರೀಮತಿ. ಪಿ. ಸೌಮ್ಯ	ಅಧ್ಯಕ್ಷರು	
	ಶ್ರೀಮತಿ. ಮಹಾಲಕ್ಷ್ಮಿ. ಹೆಚ್ ರವೀಂದ್ರ	ಸದಸ್ಯರು	

Scanned by CamScanner

4. ವಿಕಲ ಚೇತನರಿಗೆ ಹಾಗೂ ಅಂಧರಿಗೆ ಅನುಕೂಲಕಲ್ಪಿಸುವ ಪಿಠದೃಷ್ಟಿಸಂದ ಲ್ಯಾಪ್‌ಟಾಪ್ (ಬ್ರೈಲ್ ಲಿಪಿ/ಬ್ರೈಲ್‌ಕೀ ಹೊಂದಿರುವ)ಗಳನ್ನು ಸಂಬಂಧಪಟ್ಟ ಲಕ್ಷಕೀರ್ಡಿಕೆಯಲ್ಲಿ ಪರಿಶೀಲಿಸಿ ವಿತರಿಸುವ ಬಗ್ಗೆ ಜರೂರು ಕ್ರಮಕ್ಕೈಗೊಳ್ಳುವುದು.

ಮೇಲ್ಕಂಡ ಕಾರ್ಯಕ್ರಮಗಳನ್ನು ಜರೂರಾಗಿ ಅಲ್ಪಾವಧಿ ಟೆಂಡರ್ / ಕೋಟೆಷನ್ ನಿಯಮಾವಳಿಗಳ ಪ್ರಕಾರ ಕ್ರಮ ಕೈಗೊಂಡು ಫಲಾನುಭವಿಗಳಿಗೆ ಪ್ರಸಕ್ತಸಾಲಿನಲ್ಲಿಯೇ ವಿತರಣೆ ಮಾಡುವ ಬಗ್ಗೆ ಆಯುಕ್ತರು ಅಗತ್ಯ ಕ್ರಮ ಕೈಗೊಳ್ಳುವುದೆಂದು ಸಮಿತಿಯು ಸರ್ವಾನುಮತದಿಂದ ತೀರ್ಮಾನಿಸಿತು.

ಅಧ್ಯಕ್ಷರು

ಕ್ರಮ ಸಂ.	ಸದಸ್ಯರ ಹೆಸರುಗಳು		ಸಹಿ
1.	ಶ್ರೀಮತಿ. ಪಿ. ಸೌಮ್ಯ	ಅಧ್ಯಕ್ಷರು	
2.	ಶ್ರೀಮತಿ. ಮಹಾಲಕ್ಷ್ಮಿ. ಜೆಬ್ ರವೀಂದ್ರ	ಸದಸ್ಯರು	
3.	ಶ್ರೀ. ಆನಂದ್. ಸಿ.ಹೊಸೂರ್	ಸದಸ್ಯರು	
4.	ಶ್ರೀ. ಲೋಕೇಶ್.ಎನ್	ಸದಸ್ಯರು	
5.	ಶ್ರೀ. ಎ.ಕೋದಂಡರೆಡ್ಡಿ	ಸದಸ್ಯರು	
6.	ಶ್ರೀ. ಎಸ್. ಮುನಿಸ್ವಾಮಿ	ಸದಸ್ಯರು	
7.	ಶ್ರೀ. ಡಿ. ಪ್ರಮೋದ್	ಸದಸ್ಯರು	
8.	ಶ್ರೀ. ಜಿ. ಕೃಷ್ಣಮೂರ್ತಿ	ಸದಸ್ಯರು	
	ಶ್ರೀಮತಿ. ಮಂಜುಳ	ಸದಸ್ಯರು	
	ಶ್ರೀಮತಿ. ಮಂಜುಳ.ಎನ್.ಸ್ವಾಮಿ	ಸದಸ್ಯರು	
	ಶ್ರೀ. ಪರಿಷ್ ಶ್ರೀನಿವಾಸ್	ಸದಸ್ಯರು	

Scanned by CamScanner